## ಅರೆದು ಕುಡಿದಿದ್ದಾರೆ

ಎಲ್ಲ ಚಾನೆಲ್‌ನವರ ಉದ್ದೇಶ ಏಕರೂಪ ಸಂಹಿತೆ. ಟಿಆರ್‌ಪಿ ಹೆಚ್ಚಿಸಿಕೊಳ್ಳುವ ಸಂಹಿತೆ. ಚಾನೆಲ್‌ನವರು ಮಹಿಳಾ ವೀಕ್ಷಕರ ಮನಃಸ್ಥಿತಿಯನ್ನು ಚೆನ್ನಾಗಿ ಅರಿತಿದ್ದಾರೆ. ಅವರ ಕಣ್ಣಲ್ಲಿ ನೀರು ತರಿಸುವ ಫಾರ್ಮುಲ. ಯಾವುದೇ ಕನ್ನಡದ ಧಾರಾವಾಹಿಗಳಲ್ಲಿ ವೈಜ್ಞಾನಿಕ ಹೂರಣದ ಸಾರಾಂಶಗಳ ಚಿತ್ರ ಕಾಣದು. ಚಿಕ್ಕ ಮಗುವಿಗೆ ವಿಧವೆ ಪಟ್ಟ, ಚಿಕ್ಕ ಮಗು ಈಗ ಭೂತ! ನಾಗಿಣಿ ಕಥನಗಳು ಅದೆಷ್ಟು ಬಂದಿವೆಯೋ? ಇದು ಹೀಗೇ ಎಷ್ಟು ದಿನ ನಡೆಯುತ್ತದೆಯೋ?

ಎಚ್.ಆನಂದ್ ಕುಮಾರ್, ಚಿತ್ರದುರ್ಗ

## ಇದು ಇಷ್ಟೇನೆ!

ಕೆಲವು ಖಾಸಗಿ ಚಾನೆಲ್‌ಗಳು ಹಿಡನ್ ಕ್ಯಾಮೆರಾ ಇಟ್ಟುಕೊಂಡು ಕೆಲವು ಸಂಸ್ಥೆಯ, ಹೋಟೆಲ್‌ಗಳ, ಕಾರ್ಯಾಲಯಗಳ ಅಕ್ರಮ ಚಟುವಟಿಕೆಗಳನ್ನು ತುಂಬಾ ಕಷ್ಟಪಟ್ಟು ಚಿತ್ರೀಕರಣ ಮಾಡಿಕೊಂಡು ಬರುತ್ತಾರೆ. ನಂತರ ಇಂತಹ ಸಿಹಿ ತಯಾರಕರ ಅಂಗಡಿ, ಅಡುಗೆ ಮನೆ, ಶೌಚಗಳನ್ನು ತೋರಿಸುತ್ತಾ ಪ್ರಚಾರ ಪಡೆಯುತ್ತಾರೆ. ಇಂತಹ ಒಂದು ಶುಚಿರಹಿತ ಸ್ಥಳದಲ್ಲಿ ತಯಾರಾದ ಸಿಹಿಯನ್ನು ತಿಂದರೆ ಏನಾಗುತ್ತದೆ? ಎಂತಹ ರೋಗಗಳು ಬರುತ್ತವೆ ಎಂಬುದನ್ನು ಚರ್ಚೆ ಹೆಸರಿನಲ್ಲಿ ಹೇಳುತ್ತಾರೆ. ಇದು ಒಳ್ಳೆಯ ಕೆಲಸವೇ!

ಆದರೆ ನಮ್ಮ ದೇಶದಲ್ಲಿರುವ ಕಾನೂನುಗಳು ಕಠಿಣವಾಗಿವೆಯೇನೋ ಹೌದು. ಆದರೆ ಅದನ್ನು ಆಚರಣೆ ತರವುದು ಇನ್ನೂ ಕಠಿಣ. ಸ್ವಜನಪಕ್ಷಪಾತ, ಭ್ರಷ್ಟಾಚಾರ ಇದಕ್ಕೆ ಕಾರಣ. ಮತ್ತೆ ಯಥಾಸ್ಥಿತಿ ಮುಂದುವರಿಯುತ್ತದೆ.

ಮೊಳಕಾಲ್ಮೂರು ಸುರೇಶ, ಬಳ್ಳಾರಿ

## ತಲೆನೋವಿನ ಬಿಗ್ ಬಾಸ್

'ಬಿಗ್ ಬಾಸ್' ಎಂಬ ರಿಯಾಲಿಟಿ ಶೋ 'ಕಲರ್ಸ್' ವಾಹಿನಿಯಲ್ಲಿ ಪ್ರತಿದಿನ ಪ್ರಸಾರವಾಗುತ್ತಿದೆ. ಇದು ಕೇವಲ ಖಾಲಿ ಬಿದ್ದ ಸಮಯವನ್ನು ತುಂಬುವ ಕಾರ್ಯಕ್ರಮವೇ ಹೊರತು ಅದರಿಂದ ಯಾವ ರೀತಿಯ ಫಲ ಖಂಡಿತವಾಗಿಯೂ ಇಲ್ಲವೆಂದೇ ಹೇಳಬೇಕು. ನಲ್ಲಿ ನೀರಿಗೆ ಬೀದಿಯಲ್ಲಿ ಕಿತ್ತಾಡುವ ಜನರಿಗೂ ಇದುವರೆಗೆ ಬಿಗ್ ಬಾಸ್‌ನಲ್ಲಿ ಪ್ರಸಾರವಾದ ಕಾರ್ಯಕ್ರಮಕ್ಕೂ ಯಾವುದೇ ರೀತಿಯ ವ್ಯತ್ಯಾಸವಿಲ್ಲವೆಂದೇ ಹೇಳಬೇಕು. ಈ ಕಾರ್ಯಕ್ರಮ ತಲೆನೋವು ತರಿಸುವ ಕಾರ್ಯಕ್ರಮವೆಂದರೆ ತಪ್ಪಾಗಲಾರದು.

—ಪಿ. ಶಂಕರಪ್ಪ, ಶಿವಮೊಗ್ಗ

**ವಾರ್ತದ ಪತ್ರ**

## ಹೆಂಗಸೆಂದರೆ ಹೇಡಿನಾ?

ನವೆಂಬರ್ 4.11.16 ರಂದು ಶುಕ್ರವಾರ ರಾತ್ರಿ ಒಂಬತ್ತು ಗಂಟೆಗೆ ಪಬ್ಲಿಕ್ ಟಿವಿಯಲ್ಲಿ ಪ್ರಸಾರವಾದ ಅಗ್ರವಾರ್ತೆಯಲ್ಲಿ ಯುವ ಪುರುಷ ವಾರ್ತಾವಾಚಕರು ಒಂದು ಮಾತನ್ನು ಅಪ್ಪಣೆ ಕೊಡಿಸಿದರು. ಇದು, ಯಾರೋ ಕೆಲವರು ಹಾಕುತ್ತಿರುವ ಸವಾಲನ್ನು, ಸಂಬಂಧಪಟ್ಟವರು ಸ್ವೀಕರಿಸದಿರುವುದರ ಬಗ್ಗೆ. 'ಬಳೆ ತೊಟ್ಟುಕೊಂಡು ಕೂತಿದ್ದಾರೆ. ಹೇಡಿಗಳು!' ಎಂದು ಮೂರು ಬಾರಿ ಗುಡುಗಿದರು. ಮೂರನೇ ಬಾರಿ 'ಅವರು ಸೀರೆ ಉಟ್ಟುಕೊಳ್ಳೋದೊಂದೇ ಬಾಕಿ... ಹಾಗೆ ನೋಡಿದರೆ ಅವರೇ ವಾಸಿ... ಇವರು ಅವರಿಗಿಂತ ಕೀಳು!' ಎಂಬುದಾಗಿ ಪೌರುಷವನ್ನು ಮೆರೆದರು.

ಅಂದರೆ 'ಸೀರೆ ಉಟ್ಟವರು ಕೀಳು... ಇವರು ಅವರಿಗಿಂತ ಕೀಳು' ಎಂಬುದು ಈ ಮಾತಿನ ಧ್ವನಿ! ಸೀರೆ ಉಟ್ಟೇ ರಣರಂಗದಲ್ಲಿ ಕೆಚ್ಚೆದೆಯಿಂದ ಹೋರಾಡಿ, ಪುರುಷರನ್ನು ಕಾಪಾಡಿ, ಜಯಶಾಲಿಗಳಾದ ಸಾವಿತ್ರಿ, ರುಕ್ಮಿಣಿ, ಝಾನ್ಸಿರಾಣಿ– ಕಿತ್ತೂರ ರಾಣಿಯರ ಬಗ್ಗೆ ಇವರಿಗೆ ತಿಳಿದೇ ಇಲ್ಲವೇ? ಜತೆಗೆ ಇವರೆಲ್ಲರೂ ಪ್ರತ್ಯೇಕ ವೈಯಕ್ತಿಕ ಶಕ್ತಿಗಳಲ್ಲ. ಒಟ್ಟಾರೆ ಸ್ತ್ರೀ ಸಂಕುಲದ ಶೂರ ಪ್ರತಿನಿಧಿಗಳು ಮಾತ್ರ. ಇನ್ನು ಬಳೆಯ ವಿಚಾರ. ಹೆಣ್ಣುಮಕ್ಕಳು ಬಳೆ ತೊಡುವುದು ಕೆಲವು ಪುರುಷರು ಭಾವಿಸಿದಂತೆ ತಾವು ಹೇಡಿಗಳು ಎಂದು ತೋರಿಸಲು ಅಲ್ಲ. ಅದು ಅಲಂಕಾರಕ್ಕಾಗಿ; ಮತ್ತು ಅನೇಕ ಬಾರಿ ಪುರುಷನನ್ನು ಸಂತೋಷಪಡಿಸಲು! ಇಂದಿನ ಅನೇಕ ಯುವಕರು ಇಷ್ಟಪಟ್ಟು, ಚಂದಕ್ಕಾಗಿ, ಸ್ಟೀಲಿನ, ಹಿತ್ತಾಳೆಯ ಬಳೆಗಳನ್ನು ತೊಡುತ್ತಾರೆ. ಕೆಲವು ಹಿರಿಯ ಪುರುಷ ಕಲಾವಿದರು ಠೀವಿಯಿಂದ ಚಿನ್ನದ ಕಡಗಗಳನ್ನೇ ಧರಿಸುತ್ತಾರೆ. ಹಾಗಾದರೆ ಇವರೆಲ್ಲರೂ ಹೇಡಿಗಳೇ?

ಯಾರೋ ಯಾವುದೋ ಗಲ್ಲಿಯಲ್ಲಿ ನಿಂತು ಇಂತಹ ಮಾತುಗಳನ್ನು ಉದುರಿಸಿದರೆ ಯಾರೂ ಗಮನಿಸಬೇಕಾಗಿಲ್ಲ. ಇವರು ಕೂತಿರುವುದು ಕೋಟಿಗಟ್ಟಲೆ ಜನರು ವಿಶ್ವಾಸದಿಂದ ನೋಡುವಂತಹ ದೃಶ್ಯ ಮಾಧ್ಯಮ ವೇದಿಕೆಯಲ್ಲಿ. ಪುರುಷನಷ್ಟೇ ಮುಖ್ಯಳೂ, ದಕ್ಷಳೂ ಆದ ಮಹಿಳೆಯನ್ನು ಅಪಮಾನಗೊಳಿಸುವ ಹಕ್ಕನ್ನು ಇವರಿಗೆ ಕೊಟ್ಟವರಾದರೂ ಯಾರು? ಇದು ಮಾಧ್ಯಮದ ದುರುಪಯೋಗ. ಜತೆಗೆ, ಪುರುಷನಂತೆಯೇ, ಮಾತುಗಾರಿಕೆಯನ್ನು ಬಲು ದಿಟ್ಟತನದಿಂದ ನಿರ್ವಹಿಸುವ ಮಹಿಳಾ ಸಹೋದ್ಯೋಗಿ ಅವರ ಪಕ್ಕದಲ್ಲೇ ಕೂತಿದ್ದರೂ ಗಮನಿಸದೆ, ಆ ವಾರ್ತಾ ವಾಚಕರು ಬೇಜವಾಬ್ದಾರಿಯ ಹೇಳಿಕೆಗಳನ್ನು ನೀಡಿದ್ದಾರೆ. ಇದು ಖಂಡನೀಯ.

ಭಾರತೀ ಕಾಸರಗೋಡು, ಬೆಂಗಳೂರು

## ಅತ್ಯುತ್ತಮ ಧಾರಾವಾಹಿ 'ಮಹಾದೇವ'

'ಸ್ಟಾರ್ ಸುವರ್ಣ ' ಚಾನೆಲ್‌ನಲ್ಲಿ ಮೂಡಿಬರುತ್ತಿರುವ 'ಹರ ಹರ ಮಹದೇವ' ಧಾರಾವಾಹಿ ಚೆನ್ನಾಗಿದೆ. ಇದೇ ವೇಳೆಯಲ್ಲಿ ಕನ್ನಡ ಕಲರ್ಸ್‌ನಲ್ಲಿ ಮೂಡಿ ಬರುತ್ತಿರುವ ಅತ್ಯಂತ ಕೆಟ್ಟ ಹಲವು ಧಾರಾವಾಹಿಗಳಿಂದ ಎಷ್ಟೋ ಮನೆಗಳಲ್ಲಿ ಮುಕ್ತಿ ಸಿಕ್ಕಿದೆ. ಅದಕ್ಕಾಗಿ ಸುವರ್ಣ ಚಾನೆಲ್‌ನವರನ್ನು ಅಭಿನಂದಿಸುತ್ತೇನೆ. 'ಹರ ಹರ ಮಹದೇವ' ತುಂಬಾ ಅದ್ದೂರಿಯಾಗಿ ಮೂಡಿಬರುತ್ತಿದೆ. ಪೌರಾಣಿಕ ಧಾರಾವಾಹಿಯಾಗಿದ್ದರಿಂದ ಸಂಭಾಷಣೆ ಮತ್ತು ಉಚ್ಚಾರಣೆಗೆ ಹೆಚ್ಚು ಗಮನ ಕೊಡಬೇಕಾಗಿತ್ತು. 'ಸಂಭಾಷಣೆ ಹಲವು ಕಡೆ ತೀರಾ ಆಡುಭಾಷೆಯಲ್ಲಿದೆ.

ನಾಗಮಂಗಲ ಸತ್ಯನಾರಾಯಣ, ಬೆಂಗಳೂರು

## ರಾಮಾಯಣವೋ... ಮಹಾಭಾರತವೋ...

ಇದು 'ಬಿಗ್ ಬಾಸ್' ಎಂಬ ರಿಯಾಲಿಟಿ ಶೋನಲ್ಲಿ ನವೆಂಬರ್ 2 ರಂದು ರಂದು ನಡೆದ ಒಂದು ಪ್ರಸಂಗ. ಸ್ಪರ್ಧಿಗಳಿಗೆ ಮಹಾರಾಣಿ, ಸೇನಾಪತಿ ಎಂಬ ಆಟವೊಂದನ್ನು ಆಡಿಸುತ್ತಿದ್ದರು. ಆಗ ಒಂದು ಹಂತದಲ್ಲಿ ಮಹಾರಾಣಿಯಾಗಿ ನಟಿಸುತ್ತಿರುವ ಮಾಳವಿಕಾ ಅವರು ತಮ್ಮ ಮಗಳ ಪಾತ್ರದಲ್ಲಿ ನಟಿಸುತ್ತಿರುವ ಸಂಜನಾಗೆ ಮಾತು ಮಾತಿನಲ್ಲಿ 'ರಾಮನ ತಮ್ಮ ಯಾರು?' ಎಂದು ಕೇಳುತ್ತಾರೆ. ಆಗ ಸಂಜನಾ ಅವರು ತುಂಬಾ ಹೊತ್ತು ವಿಚಾರ ಮಾಡಿ ಅರ್ಧಂಬರ್ಧ ಇಂಗ್ಲಿಷಿನಲ್ಲಿ 'ಅರ್ಜುನ ಇರಬಹುದು' ಎಂದರು. ರಾಮನ ತಂದೆ ಯಾರು ಎಂದು ಕೇಳಿದಾಗ ಅಪಹಾಸ್ಯ ಮಾಡುತ್ತಾ ಏನೋ ಉತ್ತರ ಕೊಟ್ಟರು. ಆಗ ಸುತ್ತ ಕುಳಿತ ಸ್ಪರ್ಧಿಗಳು ಅದೇನೋ ಒಂದು ಮೋಜು ಮಾಡುತ್ತ ಕುಹಕವಾಗಿ ನಗುತ್ತಿದ್ದರು. ಆಗ ಮಾಳವಿಕಾ ಅವರು ಇದನ್ನೆಲ್ಲಾ ನೋಡಿದರೆ ಮಾಧ್ವರು (ಬ್ರಾಹ್ಮಣರು) ನನ್ನ ಮೇಲೆ ಕೋಪ ಮಾಡಿಕೊಳ್ಳುತ್ತಾರಪ್ಪ ಎಂದು ಉಳಿದ ಸ್ಪರ್ಧಿಗಳಿಗೆ ಹೇಳಿದರು. ಏಕೆ ಸಿಟ್ಟಾಗುತ್ತಾರೆ? ಅವರಿಗೇನು ಬೇರೆ ಕೆಲಸ ಇಲ್ಲವಾ! ಸಂಬಂಧಪಟ್ಟ ಚಾನೆಲ್ ಅಧಿಕಾರಿಗಳು ಜಾತಿ ಬಗ್ಗೆ ಮಾತನಾಡದಂತೆ ತಿಳಿಸಿದರೆ ಒಳಿತು.

—ಸುಚಿತ್ರಾ, ಶ್ರೀಕಾಂತ, ನರಸಾಪುರ, ಬೆಂಗಳೂರು

## ಹೀಗೂ ಉಂಟೆ?

ಕನ್ನಡ ಕಲರ್ಸ್ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಮನೆದೇವ್ರು' ಧಾರಾವಾಹಿಯಲ್ಲಿ ನಾಯಕನ ಕಾರು ರಸ್ತೆಯಲ್ಲಿ ಕೆಟ್ಟು ನಿಂತಿರುತ್ತದೆ. ನಾಯಕಿ ಕೇಳುತ್ತಾಳೆ 'ಏನಾಯಿತು?' ಎಂದು. ನಾಯಕ ಕೇಳುತ್ತಾನೆ ನಾಯಕಿಯನ್ನು 'ನೀರಿದೆಯ?' ಎಂದು. ನಂತರ ಅವರಿಬ್ಬರೂ ಹೋಗಿ ಎಲ್ಲಿಂದಲೊ ನೀರು ತರುತ್ತಾರೆ. ನಂತರ ನಾಯಕ ನೀರು ಹಾಕಿ ಕಾರನ್ನು ಸ್ಟಾರ್ಟ್ ಮಾಡ ಹೋಗುತ್ತಾನೆ. ಆದರೆ ಕಾರು ಸ್ಟಾರ್ಟ್ ಆಗುವುದಿಲ್ಲ. ಪ್ರಶ್ನೆ ಅದಲ್ಲ. ಈಗಿನ ಕಾಲದ ಹುಂಡೈ ಕಾರಿಗೆ ನೀರು ಹಾಕುವ ಕ್ರಮ ಎಲ್ಲಿಯಾದರೂ ಉಂಟೆ? ಹೀಗೂ ಉಂಟೆ?

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು